ಅಸಲು ದಾವೆ ನಂಃ 470/2021 ಪಿ.ಡಬ್ಲ್ಯೂಃ2– ಶಾಂತಯ್ಯ ಹಿರೇಮಠ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 13/08/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ SVN ವಕೀಲರಿಂದಃ**

1. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ವಾದಿಯವರು ನನಗೆ ಸೊಸೆಯಾಗಬೇಕು.ವಾದಿಯವರ ಮದುವೆಯ ಅಸೂಟಿ ಗ್ರಾಮದ ಕುಲಕರ್ಣಿರವರ ಮನೆಯ ಮುಂದೆ ದಿನಾಂಕ 12/05/1997 ರಂದು ಆಗಿರುತ್ತದೆ. ಕುಲಕರ್ಣಿರವರ ಮನೆಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಅಸೂಟಿ ಗ್ರಾಮದಲ್ಲಿ ಕುಲಕರ್ಣಿ ಎನ್ನುವವರು ಬಹಳ ಜನ ಇರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿಯವರಿಗೆ ಯೋಗ್ಯ ಪರಿಹಾರವನ್ನು ನೀಡಬೇಕೆಂದು ಬರೆಸಿರುತ್ತೇನೆ. ಯೋಗ್ಯ ಪರಿಹಾರವೆಂದರೆ ವಾದಿಯವರಿಗೆ ಕರೆದುಕೊಂಡು ಹೋಗಬೇಕು ಎನ್ನುವ ಕಾರಣಕ್ಕಾಗಿ ಬರೆಸಿರುತ್ತೇನೆ. ವಾದಿ ಸಾಕ್ಷಿ –5 ಬಸಯ್ಯ ಸುಂಕದರವರು ನನಗೆ ದೂರದ ಸಂಬಂಧಿಯಾಗಬೇಕು. ದೂರದ ಸಂಬಂಧಿ ಎಂದರೆ ನನಗೆ ಅಣ್ಣ ತಮ್ಮನಾಗಬೇಕು ಎಂದು ನುಡಿದಿರುತ್ತಾರೆ. ವಾದಿಯು ಪ್ರಸ್ತುತ ದಾವೆಯನ್ನು ಕುಲಕರ್ಣಿ ರವರು ಕರೆದುಕೊಂಡು ಹೋಗಬೇಕೆಂದು, ವಾದಿಯವರಿಗೆ ಪರಿಹಾರವನ್ನು ನೀಡಬೇಕೆಂದು ಮತ್ತು ವಾದಿಯವರಿಗೆ ಆರೋಗ್ಯ ಸರಿ ಇರುವುದಿಲ್ಲ ಎನ್ನುವ ಕಾರಣಕ್ಕಾಗಿ ದಾವೆಯನ್ನು ದಾಖಲು ಮಾಡಿರುತ್ತಾರೆ. ವಾದಿಯವರ ಗಂಡನ ಹೆಸರು ಕುಬೇರಪ್ಪ ಆಗಿರುತ್ತದೆ. ವಾದಿಯವರ ವಿವಾಹವು ಕುಬೇರಪ್ಪ ರವರೊಂದಿಗೆ ಆಗಿರುತ್ತದೆ. ವಾದಿಗೂ ಮತ್ತು 1ನೇ ಪ್ರತಿವಾದಿಯವರ ನಡುವೆ ಮದುವೆಯಾಗಿರುವುದಿಲ್ಲ, ನಾನು ಮದುವೆ ಹೋಗಿರುವುದಿಲ್ಲ, ಆದರೂ ಸಹ ಹೋಗಿರುತ್ತೇನೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯವರೂ ನನ್ನ ಸೊಸೆಯಾಗಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.